SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 1-7
Bi-Monthly, Peer-Reviewed, Open Access, Indexed Journal
editor@srujani.in
www.srujani.in

# 'ಜೆಎನ್‌ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು' ಕೃತಿಯಲ್ಲಿ ರಾಷ್ಟ್ರೀಯವಾದದ ಪರಿಕಲ್ಪನೆ: ಒಂದು ಚರ್ಚೆ

**ಡಾ. ಅಪ್ಪಗೆರೆ ಸೋಮಶೇಖರ್***
*ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

***Abstract:***

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ(ಜೆಎನ್‌ಯು)ದ ಮೇಲೆ 2016ರಲ್ಲಿ ಮೂಲಭೂತವಾದಿಗಳು ದಾಳಿ ಮಾಡಿದರು. ಜೆಎನ್‌ಯುನ ಅಧ್ಯಾಪಕರ ಸಂಘವು ಇದನ್ನು ತಾತ್ವಿಕವಾಗಿ, ತೀಕ್ಷ್ಣವಾಗಿ ಖಂಡಿಸಿತು. ಈ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಚರ್ಚೆಯ ಮುನ್ನೆಲೆಗೆ ಬಂದ 'ದೇಶ, ದೇಶದ್ರೋಹ, ದೇಶವಿರೋಧಿ, ರಾಷ್ಟ್ರ, ರಾಷ್ಟ್ರೀಯವಾದ, ರಾಷ್ಟ್ರೀಯತೆ, ಪ್ರಭುತ್ವ, ಭಾರತೀಯತೆ, ಸಮಾನತವಾದ, ಜ್ಞಾನ ಮೀಮಾಂಸೆ, ಅಸ್ತಿತ್ವ ಮೀಮಾಂಸೆ, ಮಹಾನ್ ವೈಭವೀಕರಣ, ನಿರ್ವಚನೆ, ವ್ಯಾಖ್ಯಾನ' ಮುಂತಾದ ಪರಿಕಲ್ಪನೆಗಳನ್ನು ಕೇಂದ್ರವಾಗಿಟ್ಟುಕೊಂಡು ಜೆಎನ್‌ಯುನ ಅಧ್ಯಾಪಕರ ಸಂಘವು 'ಟೀಚ್-ಇನ್ : ದೇಶವು ನಿಜವಾಗಿಯೂ ತಿಳಿದುಕೊಳ್ಳಬೇಕಾಗಿರುವುದು ಏನನ್ನು-ಭಾರತ, ದೇಶ ಮತ್ತು ರಾಷ್ಟ್ರೀಯವಾದ' ಎನ್ನುವ ಶೀರ್ಷಿಕೆಯ ಅಡಿಯಲ್ಲಿ 17 ಫೆಬ್ರವರಿ 2016 ರಿಂದ 17 ಮಾರ್ಚ್ 2016ರವರೆಗೆ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿತು. ಜೆಎನ್‌ಯುನ ಆಡಳಿತ ಕಛೇರಿಯ ಮುಂಭಾಗದ ಅಂಗಳದಲ್ಲಿ ಮಂಡಿಸಲಾದ ವಿದ್ವತ್‌ಪೂರ್ಣ ವಿಚಾರಗಳ ಬರಹಗಳನ್ನು ಸಂಗ್ರಹಿಸಿ, "What The Nation Really Needs To Know"ಎಂಬ ಇಂಗ್ಲೀಷ್ ಪುಸ್ತಕವನ್ನು "ಜಾನಕಿ ನಾಯರ್, ರೋಹಿತ್‌ಆಜಾದ್, ಮೊಹಿಂದರ್ ಸಿಂಗ್, ಮಲ್ಲಾರಿಕಾ ಸಿನ್ಹಾ ರಾಯ್" ಅವರು ಸಂಪಾದಿಸಿದರು. ಈ ಇಂಗ್ಲೀಷ್ ಪುಸ್ತಕದಲ್ಲಿನ ಆಯ್ದ ಲೇಖನಗಳನ್ನು 'ಜೆಎನ್‌ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು' ಎಂಬ ಹೆಸರಿನಲ್ಲಿ ಬಿ. ಶ್ರೀಪಾದ ಭಟ್‌ರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಿ. ಶ್ರೀಪಾದ ಭಟ್‌ಅವರ 'ಕೆಂಡದ ಮಳೆ ಕರೆವಲ್ಲಿ...' ಹಾಗೂ ಜಾನಕಿ ನಾಯರ್‌ಅವರ 'ಜೆಎನ್‌ಯು ವಸಂತಕ್ಕಾಗಿ ಟೀಚ್-ಇನ್' ಬರಹಗಳನ್ನೂ ಒಳಗೊಂಡಂತೆ;ಜೆ.ಎನ್.ಯು.ನ ಬಯಲ ಅಂಗಳದಲ್ಲಿ ಪ್ರಖರವಾದ ಬೌದ್ಧಿಕ ಚರ್ಚೆಯ ತಲ್ಲಣಗಳನ್ನುನಿರ್ಮಿಸಿದ "ಗೋಪಾಲ ಗುರು, ರೊಮಿಲಾಥಾಪರ್, ಪ್ರಭಾತ್ ಪಟ್ನಾಯಕ್, ಬದರೀನಾರಾಯಣ್, ಜೈರಸ್ ಬಾನಾಜಿ, ಸತ್ಯಜಿತ್‌ರಥ್, ಜಿ. ಅರುಣಿಮಾ, ಆಯೇಶಾಕಿದ್ವಾಯಿ, ಮೃದುಲಾ ಮುಖರ್ಜಿ, ತನಿಕಾ ಸರ್ಕಾರ್, ಅಚಿನ್ ವನೈಕ್, ರಣಬಿರ್‌ಚಕ್ರವರ್ತಿ, ಎ. ಮಂಗೈ"ಅವರ ಭಾಷಣಗಳ ಚಿಂತನಾರ್ಹ ಲೇಖನಗಳು ಈ ಕೃತಿಯಲ್ಲಿವೆ.

***Key Words:*** ಜೆಎನ್‌ಯು, ರಾಷ್ಟ್ರೀಯವಾದ, ರಾಷ್ಟ್ರೀಯತೆ, ದೇಶದ್ರೋಹ, ಸಮಾನತವಾದ

**ಪೀಠಿಕೆ**

ಪ್ರಸ್ತುತ 'ಬಹುತ್ವ ಭಾರತ'ದ ಪ್ರಜಾಪ್ರಭುತ್ವ, ಸಂವಿಧಾನ, ಅಭಿವ್ಯಕ್ತಿ ಸ್ವಾತಂತ್ರ್ಯ ಎದುರಿಸುತ್ತಿರುವ ಬಿಕ್ಕಟ್ಟು; ರಾಷ್ಟ್ರೀಯವಾದ, ದೇಶ, ದೇಶಭಕ್ತಿ, ದೇಶಪ್ರೇಮ, ಧರ್ಮ, ಸಂಸ್ಕೃತಿ, ನಾಗರಿಕ ಸ್ವಾತಂತ್ರ್ಯಗಳ ಅಪವ್ಯಾಖ್ಯಾನ; ಉನ್ನತ ಶಿಕ್ಷಣದ ಮೇಲಿನ ಫ್ಯಾಸಿಸಂನ ಆಕ್ರಮಣ; ಪತ್ರಿಕಾ ಸ್ವಾತಂತ್ರ್ಯ, ನ್ಯಾಯಾಂಗದ ಸ್ವಾಯತ್ತ ವ್ಯವಸ್ಥೆಯನ್ನು ಭ್ರಷ್ಟಗೊಳಿಸುತ್ತಿರುವ

*Please cite this article as:* ಅಪ್ಪಗೆರೆ ಸೋಮಶೇಖರ್. (2022). 'ಜೆಎನ್‌ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು' ಕೃತಿಯಲ್ಲಿ ರಾಷ್ಟ್ರೀಯವಾದದ ಪರಿಕಲ್ಪನೆ: ಒಂದು ಚರ್ಚೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(2), 1–7.

ಕೋಮುವಾದಿ ಶಕ್ತಿರಾಜಕಾರಣ; ಅಸಹಿಷ್ಣುತೆಯ ಅತಿರೇಕಗಳು; ವೈಚಾರಿಕವಾಗಿ ಪ್ರಶ್ನಿಸುವ, ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಲೆತ್ನಿಸುವ ಪ್ರಗತಿಪರ ಮನಸ್ಸುಗಳ ಮೇಲೆ ನಡೆಯುತ್ತಿರುವ ಹಿಂಸಾತ್ಮಕವಾದ ದಮನಕಾರಿ ಪ್ರವೃತ್ತಿ; ಆಹಾರದ ವಿಚಾರದಲ್ಲಿನ ಧರ್ಮರಾಜಕಾರಣ ಮುಂತಾದ ಜ್ವಲಂತ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಗಂಭೀರವಾದ ಬೌದ್ಧಿಕ ಜಿಜ್ಞಾಸೆಯನ್ನು ಈ ಕೃತಿ ಹುಟ್ಟುಹಾಕುತ್ತದೆ.

ಜಾತ್ಯತೀತತೆ, ಧರ್ಮನಿರಪೇಕ್ಷತೆ, ಬಹುತ್ವ, ಒಳಗೊಳ್ಳುವಿಕೆಯ ಪರಿಕಲ್ಪನೆಗಳ ಮೌಲ್ಯಗಳನ್ನು ಜಾತಿವಾದಿಗಳು ಅಪಮೌಲ್ಯೀಕರಿಸುತ್ತಿರುವ ಈ ಹೊತ್ತಿನಲ್ಲಿ ಅಂಬೇಡ್ಕರ್ ಅವರ ಚಿಂತನಾರ್ಹ ಬರಹಗಳನ್ನು ಸರಿಯಾಗಿ ಓದಿಕೊಳ್ಳುವ, ಗ್ರಹಿಸುವ, ಅರ್ಥೈಸಿಕೊಳ್ಳುವ ತುರ್ತು ನಮ್ಮ ಮುಂದಿದೆ. 'ಜಾತ್ಯತೀತ' ಪರಿಕಲ್ಪನೆಯನ್ನು ಒಪ್ಪಿಕೊಳ್ಳದ ಮೂಲಭೂತವಾದಿತನಕ್ಕೆ ಅಂಬೇಡ್ಕರ್ ಅವರು ಹೇಳಿರುವ "ಜಾತ್ಯತೀತತೆ ಎನ್ನುವುದು ಕೇವಲ ರಾಜಕೀಯವಲ್ಲ ಅದು ನೈತಿಕತೆಯ ಪ್ರಶ್ನೆಯೂ ಹೌದು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–10) ಎಂಬ ಮಾತುಅರ್ಥವಾಗಬೇಕಿದೆ. ಜಾತ್ಯತೀತತೆ ಹಾಗೂ ನೈತಿಕತೆಯನ್ನು ಮೌಲ್ಯದ ನೆಲೆಗಟ್ಟಿನಲ್ಲಿ ಬೆಸೆಯುವಲ್ಲಿ ಸೋತಿರುವ ವರ್ತಮಾನದಸಂದಿಗ್ಧತೆ, ಸಮಾನತಾವಾದಿ ಸೆಕ್ಯುಲರ್ ಭಾರತದ ಪರಿಕಲ್ಪನೆ ಬಿಕ್ಕಟ್ಟಿನಲ್ಲಿರುವ ಅಪಾಯಗಳನ್ನು ಕುರಿತು ಶ್ರೀಪಾದ ಭಟ್ ಅವರು : "ಅಪ್ರಜ್ಞಾಪೂರ್ವಕವಾಗಿ, ಸಹಜವಾಗಿ ಜನಸಾಮಾನ್ಯರ ದೈನಂದಿನ ಬದುಕಿನ ಭಾಗವಾಗಬೇಕಿದ್ದ ಸೆಕ್ಯುಲರಿಸಂ ಬದಲಿಗೆ ಪ್ರಗತಿಪರರ ಪ್ರಜ್ಞಾಪೂರ್ವಕವಾದ ರಾಜಕೀಯ ಆಯ್ಕೆಯಾಗಿ ನೆಲೆಗೊಂಡಿದ್ದು ಇಲ್ಲಿನ ದೊಡ್ಡ ಬಿಕ್ಕಟ್ಟು. ಏಕೆಂದರೆ ಶ್ರಮಣ ಸಂಸ್ಕೃತಿ, ನೆಲ ಸಂಸ್ಕೃತಿ, ಬಹುತ್ವ ಮತ್ತು ಆಧುನಿಕತೆಯನ್ನು ಪರಸ್ಪರ ಬೆಸೆಯುವಲ್ಲಿ ಈ ಜಾತ್ಯತೀತತೆಯ ಚಿಂತನೆಗಳು ವಿಫಲಗೊಂಡಿವೆ. ಒಳಗೊಳ್ಳುವ ಬೌದ್ಧಿಕತೆಯನ್ನು ಕೆಳಹಂತದವರೆಗೂ ಹೆಣೆಯುವಲ್ಲಿ ಸೋತಂತಹ ಈ ದುರಿತಕಾಲದಲ್ಲಿ ತಳಸಮುದಾಯಗಳು, ದಲಿತರು ನೇರವಾಗಿ ಧರ್ಮಾಂಧರ ಕೈಯಲ್ಲಿ ದಾಳವಾಗಿ ಬಳಕೆಗೊಂಡಿರುವುದು ಮಾತ್ರ ವಾಸ್ತವವಾದ ಸಂಗತಿ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–11) ಎಂದು ಹೇಳುತ್ತಾರೆ. ಜಾತ್ಯತೀತತೆ, ಪ್ರಗತಿಪರತೆ, ನೈತಿಕತೆಯಂತಹ ಮೌಲ್ಯಗಳು ಕೇವಲ ಬೌದ್ಧಿಕ ಚರ್ಚೆ, ಸಂವಾದ, ವಾಗ್ವಾದಕ್ಕೆ ಮಾತ್ರ ಸೀಮಿತವಾಗದೆ; ಅವುಗಳು ನಮ್ಮ ವೈಯಕ್ತಿಕ ಬದುಕಿನ ಸಹಜ ನಡೆಗಳಾಗಬೇಕಾದ ಅಗತ್ಯತೆಯನ್ನು ಇದು ಮನಗಾಣಿಸುತ್ತದೆ. ನಮ್ಮ ಪರಂಪರೆಯಲ್ಲೇ ಇರಬಹುದಾದ ವಿವೇಕವನ್ನು ಶೋಧಿಸಿಕೊಳ್ಳುತ್ತಲೇ ಎಲ್ಲರನ್ನೂ ಒಳಗೊಳ್ಳುವ, ಮನುಷ್ಯ ಸಂಬಂಧಗಳನ್ನು ಬೆಸೆಯುವ ಹಾಗೂ ತನ್ನ ಸುತ್ತಲ ಸಮಾಜ, ಸಮುದಾಯಗಳು ಧರ್ಮಾಂಧರಕ್ರೌರ್ಯಕ್ಕೆ ಬಲಿಯಾಗದಂತೆ ಕಾಪಾಡಿಕೊಳ್ಳುವ ನೈತಿಕ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಇರ್ಫಾನ್ ಹಬೀಬ್ ಅವರು ಹೇಳುವ ಹಾಗೆ "ಬಲಪಂಥೀಯ ಮತೀಯವಾದಿಗಳು ಈ ರಾಷ್ಟ್ರೀಯವಾದವನ್ನು ಧರ್ಮಶಾಸ್ತ್ರವನ್ನಾಗಿ ಪರಿವರ್ತನೆಗೊಳಿಸಿದ್ದಾರೆ. ಈ 'ಮತಾಂಧ ರಾಷ್ಟ್ರೀಯವಾದ'ದ ವಿಮರ್ಶೆಯನ್ನು ದೈವ ನಿಂದನೆ ಎಂದು ಕರೆಯಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರತ್ಯಕ್ಷವಾಗಿಯೇ ಭಯ ಒಡ್ಡಲಾಗುತ್ತಿದೆ." (ರಾಷ್ಟ್ರೀಯವಾದದ ಕ್ಲಾಸುಗಳು, ಪು–11) ಮೂಲಭೂತವಾದಿ ಮತಾಂಧತೆಯು ರಾಷ್ಟ್ರೀಯ –ವಾದವನ್ನು ಹೇಗೆ ತನ್ನ ಕೋಮುವಾದಿ ನಿಲುವಿನ ಮೂಲಕ ಭ್ರಷ್ಟಗೊಳಿಸಿದೆ ಹಾಗೂ ಅದಕ್ಕೆ ನಿರ್ದಿಷ್ಟ 'ಧರ್ಮ ಪಾವಿತ್ರ್ಯತೆ'ಯನ್ನು ಲೇಪಿಸುವ ಮೂಲಕ ಪ್ರಶ್ನಿಸದಂತೆ, ಪ್ರಶ್ನಿಸಿದರೆ ಶಿಕ್ಷಾರ್ಹ ಅಪರಾಧ ಎಂಬ ಧೋರಣೆಯನ್ನು ಬಿತ್ತಲಾಗಿರುವ ಅಪಾಯವನ್ನುಇದು ಹೇಳುತ್ತದೆ. ಪ್ರಜಾಸತ್ತಾತ್ಮಕತೆಯ ಮೌಲ್ಯವನ್ನು ಕಳೆದುಕೊಂಡು ಕೋಮುವಾದಿ, ಜಾತಿವಾದಿ, ಮತಾಂಧತೆಯ ಚಹರೆಯನ್ನು ಪಡೆದುಕೊಂಡ ಯಾವುದೇ ಶಕ್ತಿ ರಾಜಕಾರಣ ಮನುಷ್ಯ ವಿರೋಧಿಯಾಗಿಯೇ ವರ್ತಿಸುತ್ತದೆ. ಈ ಮತೀಯವಾದಿ ರಾಜಕಾರಣಕ್ಕೆ ತನ್ನದಲ್ಲದ ಅನ್ಯಜಾತಿ, ಧರ್ಮ, ಸಂಸ್ಕೃತಿ, ಭಾಷೆ, ಸಮುದಾಯಗಳು ಶತ್ರುವಾಗಿಯೇ ಕಾಣುತ್ತಿರುತ್ತವೆ ಹಾಗೂ ಸದಾ ಅವುಗಳನ್ನು ಹತ್ತಿಕ್ಕುವ, ಅವುಗಳ ಮೇಲೆ ದಬ್ಬಾಳಿಕೆ ನಡೆಸುವ ಹುನ್ನಾರವನ್ನು ಸದಾ ಹೆಣೆಯುತ್ತಿರುತ್ತದೆ. ಇಂತಹ ಸಂದರ್ಭಗಳಲ್ಲಿ ರಾಷ್ಟ್ರೀಯತೆ, ಧರ್ಮ, ಸಂಸ್ಕೃತಿ, ಆಹಾರ ಪದ್ಧತಿಯಂತಹ ಸಂಗತಿಗಳನ್ನು ವಿಷಪೂರಿತ ಅಸ್ತ್ರಗಳನ್ನಾಗಿ ಮಾರ್ಪಡಿಸಿಕೊಂಡು ರಕ್ತಪಾತಕ್ಕೆ ಬಳಸಿಕೊಳ್ಳಲು ಸಂಚು ರೂಪಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಇಂದು 'ರಾಷ್ಟ್ರೀಯವಾದ'ವು ಅಲ್ಪಸಂಖ್ಯಾತ, ತಳಸಮುದಾಯಗಳ ಮೇಲಿನ ದೌರ್ಜನ್ಯಕ್ಕೆ ಅಸ್ತ್ರವಾಗಿ ಬಳಕೆಯಾಗುತ್ತಿರುವುದು. ಟಾಗೂರರು ಹೇಳುವ "ರಾಷ್ಟ್ರೀಯವಾದಿಗಳು ಆದರ್ಶಗಳ ಕುರಿತು ಮಾತನಾಡುವಾಗ ಸ್ವತಃತಾವೇ ಸಾಮಾಜಿಕ ಆಚರಣೆಯ ಸಂದರ್ಭದಲ್ಲಿ ಸಂಪ್ರದಾಯವಾದಿಗಳಾಗಿರುವುದನ್ನು ಮರೆತಿರುತ್ತಾರೆ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–12) ಎಂಬುದು ಇಂದಿನ 'ಕೋಮುವಾದಿ ರಾಷ್ಟ್ರೀಯವಾದ'ದ ಮುಖವಾಡತನವನ್ನು ಬಯಲಾಗಿಸುವ ಮಾತಾಗಿದೆ. ಬಹುತ್ವವನ್ನು ಪ್ರತಿಪಾದಿಸುವ; ಎಲ್ಲರನ್ನೂ ಒಳಗೊಳ್ಳುವ, ಮನುಷ್ಯ ಸಂಬಂಧದ ನೆಲೆಯಲ್ಲಿ ಬೆಸೆಯುವ; ಅಭಿವ್ಯಕ್ತಿ ಸ್ವಾತಂತ್ರ್ಯ, ಸಮಾನ, ಭ್ರಾತೃತ್ವವನ್ನು ಕಾಪಾಡುವ ಮೌಲ್ಯದ ಸಂಕೇತವಾಗಬೇಕಿದ್ದ 'ರಾಷ್ಟ್ರೀಯವಾದ'ವು ಪ್ರಸ್ತುತ ದಮನಕಾರಿ ಅಸ್ತ್ರವಾಗಿ ಬಳಕೆಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಎಂಬುದಾಗಿ ಇಲ್ಲಿನ ಬರಹಗಳು ತಮ್ಮ

ತಲ್ಲಣಗಳನ್ನು ಮಂಡಿಸುತ್ತವೆ. ಹಾಗೆಯೇ ಈ ಆತಂಕಕಾರಿ ಸನ್ನಿವೇಶದಿಂದ ಬಿಡುಗಡೆಗೊಳ್ಳಲಿಕ್ಕೆ ಈ ನೆಲದ ಬಹುತ್ವ ಪರಂಪರೆಯಲ್ಲಿನ ವಿವೇಕಕ್ಕೆ ಇರಬಹುದಾದ ಸಾಧ್ಯತೆಯನ್ನು ತೋರಿಸಿಕೊಡುತ್ತವೆ.' ಬಹುತ್ವ ಭಾರತ'ದಂತಹ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಯಾವುದೇ ಸ್ವರೂಪದಚಿಂತನೆ, ತೀರ್ಮಾನಗಳು ನಿರ್ದಿಷ್ಟ ಧರ್ಮ, ಜಾತಿಕೇಂದ್ರಿತವಾಗಿರದೆ, ಯಾವುದೇ ಹಿತಾಸಕ್ತಿಯ ಹಿಡನ್ ಅಜೆಂಡವಾಗಿರದೆ ಅವು ಮನುಷ್ಯ ಕೇಂದ್ರಿತವಾಗಿರಬೇಕಾಗುತ್ತದೆ.

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಸಂದರ್ಭದಲ್ಲಿ 'ರಾಷ್ಟ್ರೀಯವಾದ'ದ ಪರಿಕಲ್ಪನೆ ಪಡೆದುಕೊಂಡಿರುವ ಪಲ್ಲಟಗಳು, ಅರ್ಥ ಸಾಧ್ಯತೆಗಳು, ಅಪಾರ್ಥಗಳು, ಮೂಲಭೂತವಾದಿ ಚಹರೆಗಳು, ಮಾನವೀಯ ಸ್ವರೂಪಗಳು ಇತ್ಯಾದಿಗಳನ್ನು ತಮ್ಮ ಚರ್ಚೆಯಲ್ಲಿ ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಿರುವ ಜಾನಕಿ ನಾಯರ್ ಅವರು ರಾಷ್ಟ್ರೀಯವಾದಕ್ಕೆ ಸಂಬಂಧಿಸಿದ ಹಲವು ತಾತ್ವಿಕ ಪ್ರಶ್ನೆಗಳನ್ನು ಮುನ್ನೆಲೆಗೆ ತರುತ್ತಾರೆ. ಈ ಹಿನ್ನೆಲೆಯಲ್ಲಿ ಜೆಎನ್‌ಯು ಬೌದ್ಧಿಕ ಆವರಣ ಹೇಗೆ ತನ್ನ ಉಪನ್ಯಾಸಗಳ ಮೂಲಕ; ಭಾರತ ಎದುರಿಸುತ್ತಿರುವ ಹಲವು ಬಗೆಯ ಸಂಕೀರ್ಣ ಸಂಗತಿಗಳನ್ನು, ರಾಷ್ಟ್ರ–ಪ್ರಭುತ್ವ–ರಾಷ್ಟ್ರೀಯವಾದ ಎಂಬ ಪರಿಕಲ್ಪನೆಗಳು ರೂಪುಗೊಂಡ ಚಾರಿತ್ರಿಕ ನೆಲೆಗಳನ್ನು ಹಾಗೂ ಪ್ರಸ್ತುತ ರಾಷ್ಟ್ರೀಯವಾದ ಫ್ಯಾಸಿಸಂನ ಭೀಕರತೆಯತ್ತ ಸಾಗುತ್ತಿರುವ ಅಪಾಯಗಳನ್ನು ಜಿಜ್ಞಾಸೆಗೆ ಒಳಪಡಿಸುವ ಮೂಲಕ ಅವುಗಳ ಒಳಸುಳಿಗಳನ್ನು ಹೆಕ್ಕಿತೆಗೆದುಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ವಸಾಹತುಶಾಹಿ ಸಂದರ್ಭದಲ್ಲಿ"ಭಾರತದ ರಾಷ್ಟ್ರೀಯವಾದವು ನಾವು ಅಂದುಕೊಂಡಷ್ಟು ಎಲ್ಲ ಪ್ರದೇಶ, ಜಾತಿ, ಭಾಷೆ, ಬುಡಕಟ್ಟುಗಳನ್ನು ಒಳಗೊಂಡಿರಲಿಲ್ಲ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–29) ಎಂಬ ಬಹುಮುಖ್ಯ ಮಾತನ್ನು ಮಂಡಿಸುತ್ತಲೇ; ಇಂದಿನ ಮೂಲಭೂತವಾದಿ ರಾಷ್ಟ್ರೀಯವಾದವು ಹೇಗೆ ಈ ಬಗೆಯ 'ಎಕ್ಸ್‌ಕ್ಲೂಸಿವ್' (ಹೊರಗಿಡುವ) ಧೋರಣೆಯಿಂದ ಕೂಡಿದೆ ಎಂಬ ವಸ್ತುಸ್ಥಿತಿಯನ್ನು ಮುಂದಿಟ್ಟಿದ್ದಾರೆ. "ಪ್ರದೇಶಗಳು ಚರಿತ್ರೆಯನ್ನು ಒಳಗೊಂಡಿರುತ್ತವೆ ಮತ್ತು ಚರಿತ್ರೆಗಳು ಪ್ರಾದೇಶಿಕವಾಗಿರುತ್ತವೆ. ಪ್ರತಿಯೊಂದು ಪ್ರದೇಶಕ್ಕೆ ಅದರದ್ದೇ ಆದ ಲಯವಿರುತ್ತದೆ.ಇವನ್ನು ನಿರ್ಲಕ್ಷಿಸಲು ಬರುವುದಿಲ್ಲ ಎಂದು ನವ–ರಾಷ್ಟ್ರದ ಉತ್ಸಾಹಿಗಳು ನೆನಪಿನಲ್ಲಿಡಬೇಕು. ಭಾರತದ ಬಹುತ್ವ ಅಥವಾ ವೈವಿಧ್ಯತೆ ಕಾಮನಬಿಲ್ಲಿನ ಬಣ್ಣಗಳಷ್ಟು ಸರಳವಲ್ಲ. ಅದರಲ್ಲಿ ಶ್ರೇಣೀಕೃತವಾದ ಹಲವು ಭಿನ್ನತೆಗಳಿವೆ. ಕೆಲವು ಹೊಂದಿಕೊಳ್ಳುತ್ತವೆ, ಕೆಲವು ಹೊಂದಿಕೊಳ್ಳುವುದಿಲ್ಲ. ಆದರೆ ಈ ಎಲ್ಲಾ ಭಿನ್ನತೆಗಳನ್ನು ಮೊದಲು ಒಪ್ಪಿಕೊಳ್ಳಬೇಕು. ಎಲ್ಲವನ್ನೂ ಏಕೀಕರಿಸುವ ಆತುರ ಸಲ್ಲ... ಇನ್ನಷ್ಟು ಶ್ರೀಮಂತವಾದ ಭಿನ್ನತೆಗಳ ಕಲ್ಪನೆಯನ್ನು ಕಟ್ಟಿಕೊಳ್ಳಬೇಕು ಮತ್ತು ಅಂತಹ ಭಿನ್ನತೆಗಳನ್ನು ರಕ್ಷಿಸಲು ಸಂವಿಧಾನಿಕ ಗ್ಯಾರಂಟಿಗಳನ್ನು ಕೊಡಬೇಕು. ಇದು ನಮ್ಮ ಗಣತಂತ್ರದ ಭವಿಷ್ಯವನ್ನು ಕಲ್ಪಿಸುವ ವಿಧಾನವಾಗಬೇಕು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–30) ಎಂದು ಹೇಳುತ್ತಲೇ ಪ್ರಸ್ತುತ ರಾಷ್ಟ್ರೀಯವಾದವು 'ಬಹುತ್ವ, ಭಿನ್ನತೆ, ಹಲವುತನಗಳನ್ನು 'ಒಳಗೊಳ್ಳುವ' (ಇನ್‌ಕ್ಲೂಸಿವ್) ಚಹರೆ'ಯನ್ನು ಧಾರಣೆ ಮಾಡಿಕೊಳ್ಳಬೇಕಾಗಿದೆ ಎಂದು ಪ್ರತಿಪಾದಿಸುತ್ತಾರೆ. ಪ್ರಸ್ತುತ ಹಲವು ಬಗೆಯ ವ್ಯವಸ್ಥಿತವಾದ ಹುನ್ನಾರಗಳಿಗೆ ಬಲಿಯಾಗುತ್ತಿರುವ ಶೋಷಿತ ಸಮುದಾಯಗಳು ಪ್ರಜ್ಞಾಪೂರ್ವಕವಾಗಿ "ದಲಿತರಿಗೆ ಚಾರಿತ್ರಿಕ ಗಾಯಗಳನ್ನು ಮಾಡಿದವರ್ಯಾರು? ಆ ಗಾಯಗಳನ್ನು ಇಂದು ಯಾರು ಭರಿಸಬೇಕು?" (ರಾಷ್ಟ್ರೀಯವಾದದ ಕ್ಲಾಸುಗಳು, ಪು–30) ಎಂಬ ಶತಮಾನಗಳ 'ದಲಿತತ್ವವಾದಿ ತಾತ್ವಿಕ ಪ್ರಶ್ನೆ'ಯನ್ನು ಜಾತಿವಾದಿಗಳ ಎದುರು ಮಂಡಿಸುವ ತುರ್ತಿದೆ ಎಂಬುದನ್ನು ಸೂಚಿಸಿದ್ದಾರೆ.' ಫ್ಯಾಸಿಸಂ ರಾಷ್ಟ್ರೀಯವಾದ'ವು ಸಾಮುದಾಯಿಕ ಬಹುತ್ವವನ್ನು ಮಾತ್ರವಲ್ಲದೆ, ಭಾಷಿಕ ಬಹುತ್ವವನ್ನು ಹೇಗೆ ನಾಶ ಮಾಡಲು ಹೊರಟಿದೆ, ಆಮೂಲಕ ಸ್ಥಳೀಯ ಭಾಷೆಯಲ್ಲಿ ದಾಖಲಾಗಿರುವ ಈ ನೆಲದ ನಿಜದ ಚರಿತ್ರೆ, ಸಂಸ್ಕೃತಿ, ಜ್ಞಾನ, ಪರಂಪರೆಯ ಜಲಕಣ್ಣುಗಳನ್ನು ಕಿತ್ತುಹಾಕಲು ಹೊರಟಿರುವ ಅಪಾಯಗಳನ್ನು ಸಹಾ ದಾಖಲಿಸಿದ್ದಾರೆ.

**ನಾಗರಿಕ ಸ್ವಾತಂತ್ರ್ಯ ಹಾಗೂ ಭಾರತೀಯ ರಾಷ್ಟ್ರೀಯವಾದ**

ಭಾರತೀಯ ನಾಗರಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಹಿಷ್ಣುತೆಗಳು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಆತ್ಮವಿಮರ್ಶೆಯ ಪ್ರಶ್ನೆಗಳಾಗಿ ಕೇಳಿಕೊಳ್ಳಬೇಕಾದ ಅಗತ್ಯತೆಯನ್ನು ಕುರಿತು ಮಾತನಾಡುವ ಮೃದುಲಾ ಮುಖರ್ಜಿ ಅವರು ರಾಷ್ಟ್ರೀಯವಾದದ ಪರಿಕಲ್ಪನೆ ದುರ್ಬಳಕೆಯಾಗುತ್ತಿರುವ ಅಪಾಯವನ್ನು ಚರ್ಚಿಸಿದ್ದಾರೆ. ಭಾರತವೆಂದರೆ 'ಹಲವು (ಬಹುತ್ವ) ಭಾರತಗಳ ಒಂದು ಒಕ್ಕೂಟ'ವೆಂದು ಪರಿಭಾವಿಸಿಕೊಳ್ಳಬಹುದು. 'ಹಲವು' ಎಂಬುದನ್ನು ಭಾರತೀಯ ಬಾಷೆ, ಸಮಾಜ, ಸಮುದಾಯ, ಸಂಸ್ಕೃತಿ, ಧರ್ಮ, ಆಚಾರ–ವಿಚಾರ, ಆಹಾರ ಇತ್ಯಾದಿಗಳ ಹಿನ್ನೆಲೆಯಲ್ಲಿಯೂ ನಿರ್ವಚಿಸಿಕೊಳ್ಳಬೇಕಿದೆ. ಹಲವು ಭಾರತಗಳು ಇರುವ ಹಾಗೆ ನಮ್ಮ ನಡುವೆ 'ಪ್ರಗತಿಪರ ರಾಷ್ಟ್ರೀಯವಾದ, ಕ್ರಾಂತಿಕಾರಿ ರಾಷ್ಟ್ರೀಯವಾದ, ಪ್ರತಿಗಾಮಿ ರಾಷ್ಟ್ರೀಯವಾದ, ಉದ್ರೇಕಕಾರಿ ರಾಷ್ಟ್ರೀಯವಾದ, ಆಡಂಬರದ ರಾಷ್ಟ್ರೀಯವಾದ' ಎಂಬ 'ಹಲವು ರಾಷ್ಟ್ರೀಯವಾದ'ಗಳು ಇವೆ. ಎಂದು ಹೇಳುತ್ತಲೇ: "ನಮ್ಮದು ಸ್ವಾತಂತ್ರ್ಯ ಹೋರಾಟವು ನೀಡಿದಂತಹ ಕ್ರಾಂತಿಕಾರಿ ರಾಷ್ಟ್ರೀಯವಾದ; ಮಾನವೀಯತೆಯ, ಜನತೆಯ ಪರವಾಗಿ

ಸ್ಪಂದಿಸುವಂತಹ ರಾಷ್ಟ್ರೀಯವಾದ. ಈ ಪರಂಪರೆಯನ್ನು ನಾವು ಪಟ್ಟು ಹಿಡಿದು ಪ್ರತಿಪಾದಿಸುತ್ತೇವೆ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–77) ಎಂದು ಪ್ರತಿಗಾಮಿ ರಾಷ್ಟ್ರೀಯವಾದಿಗಳಿಗೆ ಸವಾಲೆಸಗುತ್ತಾರೆ. ಮೇಲ್ಕಾಣಿಸಿದ ಹಲವು ರಾಷ್ಟ್ರೀಯವಾದಗಳಲ್ಲಿ ನಮ್ಮ ನಿಲುವು ಯಾವುದರ ಪರ? ಎಂಬುದನ್ನು ನಾವೆಲ್ಲರೂ ಕೇಳಿಕೊಳ್ಳಬೇಕಿದೆ. ಮುಖರ್ಜಿ ಅವರು, ಭಾರತದ ಚಾರಿತ್ರಿಕ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದ ಹಲವು ಸಂಗತಿಗಳನ್ನು ಚರ್ಚಿಸುತ್ತ, ಗಾಂಧೀಜಿಯವರು 1922ರಲ್ಲಿ 'ಯಂಗ್ ಇಂಡಿಯಾ'ದಲ್ಲಿ ಬರೆದಿರುವ "ವಾಕ್ ಮತ್ತು ಸಂಘ ರಚನೆಯ ಸ್ವಾತಂತ್ರ್ಯ ನಮ್ಮೆಲ್ಲರ ಹಕ್ಕು. ಅದರ ಪರವಾಗಿ ನಿರಂತರವಾಗಿ ಹೋರಾಡಬೇಕಾಗಿದೆ. ನಮ್ಮ ಬದುಕಿನ ಜೊತೆ ಸಂಬಂಧಿಸಿದ ಈ ಪ್ರಾಥಮಿಕ ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಯನ್ನು ನಾವೆಲ್ಲ ಮಾಡಬೇಕಾಗಿದೆ. ಇದಕ್ಕಾಗಿ ನೀವು ಜೀವ ಕೊಡುವ ಪ್ರಮೇಯ ಬಂದರೆ ಹಿಂದುಮುಂದು ನೋಡಬೇಡಿ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–83) ಎಂಬ ಮಾತುಗಳನ್ನು ಉಲ್ಲೇಖಿಸುತ್ತ, ಜನತೆಯ ಅಭಿವ್ಯಕ್ತಿ ಹಾಗೂ ನಾಗರಿಕ ಸ್ವಾತಂತ್ರ್ಯದ ಹಕ್ಕನ್ನು ರಾಷ್ಟ್ರೀಯವಾದವು ಪ್ರತಿಪಾದಿಸಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 1936ರಲ್ಲಿ ನೆಹರೂ ಅವರು ಹೇಳಿದಂತೆ : "ನಾಗರಿಕ ಸ್ವಾತಂತ್ರ್ಯಗಳನ್ನು ದಮನ ಮಾಡಿದರೆ ದೇಶವು ತನ್ನೆಲ್ಲಾ ಚೈತನ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ಅದು ದುರ್ಬಲಗೊಂಡು ನಿರ್ಜೀವವಾಗುತ್ತದೆ.... ಪ್ರಜಾಪ್ರಭುತ್ವವೆಂದರೆ ಬರಿಯ ಪಾರ್ಲಿಮೆಂಟು ಅಲ್ಲ. ಬರಿಯ ಚುನಾವಣೆಯಲ್ಲ. ಅಂತಿಮವಾಗಿ ಅದು ಸಂವಾದವನ್ನು ಒಳಗೊಂಡಿರುತ್ತದೆ, ಇಲ್ಲಿ ಭಿನ್ನ ದನಿಗಳಿಗೂ ಗೌರವ, ಸ್ವೀಕೃತಿ ಇರುತ್ತದೆ. ಅವರಿಗೂ ಸೂಕ್ತ ವೇದಿಕೆ ಕಲ್ಪಿಸಲಾಗುತ್ತದೆ." (ರಾಷ್ಟ್ರೀಯವಾದದ ಕ್ಲಾಸುಗಳು, ಪು–84–87) ರಾಷ್ಟ್ರೀಯವಾದಕ್ಕೆ ಇರಬೇಕಾದ ಪ್ರಜಾಸತ್ತಾತ್ಮಕ–ಧರ್ಮನಿರಪೇಕ್ಷ ಗುಣವನ್ನು ಇದು ಮನಗಾಣಿಸುತ್ತದೆ. ವಿಮರ್ಶೆ, ಸಂವಾದ, ಚರ್ಚೆಗಳನ್ನು ಹತ್ತಿಕ್ಕಿ; ಹಿಂಸಾತ್ಮಕತೆಯನ್ನು ನಡೆಯನ್ನಾಗಿಸಿಕೊಂಡಿರುವ 'ಪ್ರತಿಗಾಮಿ ರಾಷ್ಟ್ರೀಯವಾದಿ'ಗಳು ಇದನ್ನು ಅರಿವಾಗಿಸಿಕೊಳ್ಳಬೇಕಿದೆ.

ಹುಸಿ ದೇಶಪ್ರೇಮ–ದೇಶಭಕ್ತಿ, ಕುರುಡು ರಾಷ್ಟ್ರೀಯವಾದದ ನೆಪದಲ್ಲಿ ಇಂದು ಜರುಗುತ್ತಿರುವ ಹಿಂಸಾತ್ಮಕ ಹಲ್ಲೆ, ದೌರ್ಜನ್ಯಗಳು ನಾಗರೀಕ ಸಮಾಜಕ್ಕೆ ಎಸಗಿದ ದ್ರೋಹ ಹಾಗೂ ಕಳಂಕವಾಗಿವೆ. ಅಹಿಂಸಾವಾದಿ ಸಂವೇದನೆ ಹಾಗೂ ಒಳಗೊಳ್ಳುವಿಕೆಯತತ್ವವನ್ನು ಒಳಗೊಂಡಾಗ ಮಾತ್ರರಾಷ್ಟ್ರೀಯವಾದದ ಪರಿಕಲ್ಪನೆಗೆ ನಿಜ ಅರ್ಥ ದಕ್ಕಲಿಕ್ಕೆ ಸಾಧ್ಯ.ಮುಖರ್ಜಿ ಅವರು 'ಅಹಿಂಸಾವಾದಿ ಸಹಿಷ್ಣು ರಾಷ್ಟ್ರೀಯವಾದ'ವನ್ನು ಗಾಂಧೀಜಿಯವರ ಎರಡು ಘಟನೆಗಳ ಮೂಲಕ ವಿಶ್ಲೇಷಿಸಿದ್ದಾರೆ. 1942ರ ಕ್ವಿಟ್ ಇಂಡಿಯಾ ಚಳವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಗಲಭೆಯೊಂದರಲ್ಲಿ ಗಾಯಗೊಂಡ ಬ್ರಿಟಿಷ್ ಸೈನಿಕನೊಬ್ಬನನ್ನು ಭಾರತೀಯರು ಆಸ್ಪತ್ರೆಗೆ ಕರೆದೊಯ್ಯುತ್ತಾರೆ. ಇದರಿಂದ ಅಚ್ಚರಿಗೊಂಡವರಿಗೆ ಗಾಂಧೀಜಿ "ನಮ್ಮ ರಾಷ್ಟ್ರೀಯವಾದವು ಬ್ರಿಟೀಷರನ್ನು ವಿರೋಧಿಸುವುದಿಲ್ಲ, ನಮ್ಮ ವಿರೋಧವು ಬ್ರಿಟೀಷ್ ಆಡಳಿತದ ವಿರುದ್ಧ ಮಾತ್ರ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–87) ಎಂದು ಹೇಳುತ್ತಾರೆ. ಎಲ್ಲರ ವಿರೋಧಗಳ ನಡುವೆಯೂ ಗಾಂಧೀಜಿಯವರು 1946ರಲ್ಲಿ ಪೂರ್ವ ಬಂಗಾಳದ ನೌಖಾಲಿಯಲ್ಲಿ ಕೋಮುಗಲಭೆಗೆ ತುತ್ತಾಗಿದ್ದ ಜನರ ಬಳಿಗೆ ಹೋಗಿ ಸಾಂತ್ವಾನ ಹೇಳುತ್ತ ಸಾಮರಸ್ಯ ಮೂಡಿಸಲು ಪ್ರಯತ್ನಿಸುತ್ತಿರುತ್ತಾರೆ. ಈ ಎರಡೂ ಘಟನೆಯ ಮೂಲಕ ಮುಖರ್ಜಿ ಅವರು, 'ಅಹಿಂಸಾವಾದಿ ಹಾಗೂ ಸಹಿಷ್ಣುತೆ'ಯ ನೆಲೆಗಟ್ಟಿನ ಮೇಲೆ ರಾಷ್ಟ್ರೀಯವಾದವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮಂಡಿಸಿದ್ದಾರೆ.

**ಧಾರ್ಮಿಕ ರಾಷ್ಟ್ರೀಯವಾದ ಮತ್ತು ಮತಾಂಧತೆ**

ಸಂಕುಚಿತ, ಮತಾಂಧ, ಮೂಲಭೂತವಾದಿಧಾರ್ಮಿಕ ತಳಹದಿಯ ಮೇಲೆ ರೂಪಿಸಲ್ಪಡುವ ರಾಷ್ಟ್ರೀಯವಾದವು ಹಿಂಸಾ ಸ್ವರೂಪದ ಕೋಮುವಾದ, ಮತಾಂಧತೆಯನ್ನು ಉಸಿರಾಡುತ್ತಿರುತ್ತದೆ. ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಾಕರಿಸುತ್ತದೆ. ಈ ಎಲ್ಲಾ ಅಪಾಯಗಳಿಂದ ರಾಷ್ಟ್ರೀಯವಾದವನ್ನು ಬಿಡುಗಡೆಗೊಳಿಸಬೇಕಾದರೆ, ಗಾಂಧೀಜಿಯವರು ಪ್ರತಿಪಾದಿಸಿದ "ದೇವರು ಮತ್ತು ದೇಶದ ಕಣ್ಣಲ್ಲಿ ಜಾತಿ, ಧರ್ಮಗಳನ್ನು ಮೀರಿ ಎಲ್ಲರೂ ಸಮಾನರು. ಕೋಮು ಸೌಹಾರ್ದತೆಯನ್ನು ಕಾಪಾಡುವುದು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–92) ನಮ್ಮೆಲ್ಲರ ಜವಾಬ್ದಾರಿ ಎಂಬುದನ್ನು ಒಪ್ಪಿಕೊಳ್ಳುತ್ತ; "ಅನ್ಯರ ವಿರುದ್ಧದ ಶಾಶ್ವತ ಹಗೆತನವು ದೇಶದ ಮೂಲ ಅಡಿಪಾಯ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–92) ಎಂದ ವಿ. ಡಿ. ಸಾವರ್ಕರ್ ಅವರ ನಿಲುವನ್ನು ಖಂಡಿಸುತ್ತ; ಹಗೆತನವಿಲ್ಲದ ರಾಷ್ಟ್ರೀಯವಾದಿ ಅಸ್ಮಿತೆಯನ್ನು ಕಟ್ಟಿಕೊಳ್ಳಬೇಕಾದ ತುರ್ತಿದೆ ಎಂಬ ವಾದವನ್ನು ತನಿಕಾ ಸರ್ಕಾರ್ ಅವರು ಮಂಡಿಸುತ್ತಾರೆ. 'ಅಹಿಂಸಾವಾದಿ ರಾಷ್ಟ್ರೀಯವಾದ'ದ ಪ್ರತಿಪಾದನೆ ಇದಾಗಿದೆ. ಸರ್ಕಾರ್ ಅವರು, 1921ರಲ್ಲಿ ಗಾಂಧೀಜಿಯವರು ಬರೆದ "ಬಡತನ ಮತ್ತು ಹಸಿವಿನಿಂದ ಬಳಲುತ್ತಿರುವ ಜನರಿಗೆ ಕೆಲಸ ಮತ್ತು ಆಹಾರ ಖಾತರಿಪಡಿಸುವ ವೇತನದ ರೂಪದಲ್ಲಿ ಮಾತ್ರ ದೇವರು ದರ್ಶನ ಕೊಡುವ ಧೈರ್ಯ ಮಾಡಬಹುದು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–94) ಎಂಬ ಮಾತುಗಳನ್ನು ಉಲ್ಲೇಖಿಸುತ್ತಲೇ; ಜಾತಿ ಶ್ರೇಣೀಕೃತ ವ್ಯವಸ್ಥೆ, ವರ್ಗ ವ್ಯವಸ್ಥೆ, ಸಂಪತ್ತಿನ ಕೇಂದ್ರೀಕರಣ, ಜಮೀನ್ದಾರರು

ಹಾಗೂ ಗೇಣಿದಾರರ; ಆಳುವ ಮತ್ತು ಆಳಿಸಿಕೊಳ್ಳುವ ವರ್ಗಗಳ ನಡುವಿನ ಸಂಬಂಧ, ಅಸ್ಪೃಶ್ಯತೆ ಹಾಗೂ ಅಸ್ಪೃಶ್ಯರ ಬಗೆಗಿನ ನಿಲುವುಗಳ ಬಗೆಗೆ ಗಾಂಧೀಜಿಯವರಿಗಿದ್ದ ವೈರುಧ್ಯದ ನಿಲುವು ಹಾಗೂ ಗಾಂಧೀಜಿಯವರ ಚಿಂತನೆಯಲ್ಲಿನ ತೊಡಕುಗಳನ್ನು ಪ್ರಶ್ನಾತ್ಮಕವಾಗಿ ಚರ್ಚೆಗೊಳಪಡಿಸುವ ಸರ್ಕಾರ್ ಅವರು ಸೂಚ್ಯವಾಗಿ ಗಾಂಧೀಜಿಯವರ ಈ ಎಲ್ಲಾ ವೈರುಧ್ಯಗಳಿಂದ ನಮ್ಮನ್ನು ಬಿಡಿಸಿಕೊಂಡೇ ರಾಷ್ಟ್ರೀಯವಾದವನ್ನು ನಿರ್ವಚಿಸಿಕೊಳ್ಳಬೇಕಿದೆ ಎಂದು ಹೇಳುತ್ತಾರೆ.

ದಕ್ಷಿಣ ಆಫ್ರಿಕಾದಲ್ಲಿ ಕ್ಷೌರಿಕನೊಬ್ಬ ಗಾಂಧೀಜಿಯವರಿಗೆ ಕ್ಷೌರ ಮಾಡಲು ನಿರಾಕರಿಸಿದ ಹಾಗೂ ಜಲಿಯನ್‌ವಾಲಾಬಾಗ್ ಘಟನೆಗಳನ್ನು ನೈತಿಕತೆಯ ಪ್ರಶ್ನೆಯ ಹಿನ್ನೆಲೆಯಲ್ಲಿ ಬರೆಯುವ ಗಾಂಧೀಜಿಯವರು "ನಮ್ಮ ದೇಶದಲ್ಲಿ ಕ್ಷೌರಿಕರು ಅಸ್ಪೃಶ್ಯ ಸಮುದಾಯದವರಿಗೆ ಚೌರ ಮಾಡಲು ನಿರಾಕರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ನಮ್ಮ ಪಾಪಗಳಿಗೆ ದೊರಕಿದ ಶಿಕ್ಷೆ ಎನ್ನುವ ಕಾರಣಕ್ಕಾಗಿ ನನಗೆ ಈ ಘಟನೆ ಕುಪಿತಗೊಳಿಸಲಿಲ್ಲ. ...ನಮ್ಮ ಅಸ್ಪೃಶ್ಯತೆ ಆಚರಣೆಯ ಅಪರಾಧಕ್ಕೆ ಜಲಿಯನ್‌ವಾಲಾಬಾಗ್ ಸೂಕ್ತ ಪ್ರತೀಕಾರವಲ್ಲವೆ? ನಾವೂ ಸಹಾ ನಮ್ಮ ಪ್ರಜೆಗಳ ಮೇಲೆ ಡೈಯರಿಸಂ, ಓಡಾಯರಿಸಂನ್ನು ಪಾಲಿಸುತ್ತಿಲ್ಲವೆ? ನಾವು ಇಂಗ್ಲೀಷರಿಗೆ ಶಾಪ ಹಾಕುತ್ತಾ ಮಾಡುವ ಆಪಾದನೆಗಳೆಲ್ಲವನ್ನೂ, ಅಸ್ಪೃಶ್ಯರು ನಮಗೆ ಶಾಪ ಹಾಕುತ್ತಾ ನಮ್ಮ ಮೇಲೆ ಮಾಡಬಲ್ಲರು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–98) ಎಂದು ಹೇಳುತ್ತಾರೆ. ಇದೊಂದು ರೀತಿಯಲ್ಲಿ ನಮ್ಮನ್ನು ನಾವೇ ನಿಷ್ಠೂರವಾಗಿ ಮುಖಾಮುಖಿಯಾಗುವ ಕ್ರಮವಾಗಿದೆ. ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ನಡುವಿನ ಮಹತ್ವದ ವಾಗ್ವಾದ ಕೆಲವು ಮುಖ್ಯ ಸಂಗತಿಗಳನ್ನು ಚರ್ಚೆಗೆ ಒಳಪಡಿಸುತ್ತಲೇ; ಅಂಬೇಡ್ಕರ್ ಅವರು "ನನಗೆ ಒಂದು ದೇಶ ಇದೆಯೆ?"ಎಂಬ ತಾತ್ವಿಕ ಪ್ರಶ್ನೆಯ ಮೂಲಕ, ಈ ದೇಶದ ಬಹುಸಂಖ್ಯಾತ ಅಸ್ಪೃಶ್ಯರನ್ನು ಎಲ್ಲ ರೀತಿಯಲ್ಲಿಯೂ ಹೊರಗಿಟ್ಟು ಭಾರತವನ್ನು ಸಮಗ್ರ ರಾಷ್ಟ್ರವನ್ನಾಗಿ ಪರಿಭಾವಿಸಲಿಕ್ಕೆ ಸಾಧ್ಯವೆ? ಎಂಬುದಾಗಿ 'ಒಳಗೊಳ್ಳುವ ರಾಷ್ಟ್ರೀಯವಾದ'ದ ಪ್ರಶ್ನೆಯನ್ನು ಗಾಂಧೀಜಿಯವರ ಮುಂದಿಟ್ಟ ಸಂಗತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಚಪ್ಪಲಿ ಹೊಲೆಯುವ, ಮಲ ಗುಡಿಸುವ ಅಸ್ಪೃಶ್ಯರನ್ನು ತಮ್ಮ ಮನೆಗೆ ಆಹ್ವಾನಿಸಿ ಆತ್ಮೀಯವಾಗಿ ಒಡನಾಡಿದ; ಮನೆಗೆ ಅತಿಥಿಗಳಾಗಿ ಬಂದ ದಲಿತ ಕ್ರಿಶ್ಚಿಯನ್ ಗುಮಾಸ್ತನ ಮಲವನ್ನು ಸ್ವಚ್ಛಗೊಳಿಸಲು ನಿರಾಕರಿಸಿದ ಕಸ್ತೂರಿ ಬಾ ಅವರನ್ನು ಮನೆಯಿಂದ ಹೊರದೂಡಿದ್ದು; ಎಲ್ಲರ ವಿರೋಧ, ಬಹಿಷ್ಕಾರದ ಬೆದರಿಕೆಯ ನಡುವೆಯೂ ಅಹಮದಾಬಾದ್‌ನ ತಮ್ಮ ಆಶ್ರಮಕ್ಕೆ ದಲಿತ ಕುಟುಂಬವೊಂದನ್ನು ಸೇರಿಸಿಕೊಂಡ ಹಾಗೂ "ಅಸ್ಪೃಶ್ಯತೆಗಿಂತಲೂ ಕೆಟ್ಟದಾದದ್ದು ಜಗತ್ತಿನಲ್ಲಿ ಮತ್ತ್ಯಾವುದೂ ಇಲ್ಲ. ಹಿಂದೂ ಧರ್ಮವನ್ನು ಈ ಅಸ್ಪೃಶ್ಯತೆಯೊಂದಿಗೆ ಸಹಿಸಿಕೊಳ್ಳಲು ಸಹ ನನಗೆ ಸಾಧ್ಯವಿಲ್ಲ. ನಿಕೃಷ್ಟ ಗುಲಾಮರಾಗಿ ಬದುಕುವುದಕ್ಕಿಂತ ಅಸ್ಪೃಶ್ಯರು ಸವರ್ಣರ ವಿರುದ್ಧ ಹೋರಾಡಬೇಕು. ಈ ಪರಿಯ ಅಸ್ಪೃಶ್ಯತೆಯು ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿದ್ದರೆ, ಅಂತಹ ಧರ್ಮದಿಂದ ನನಗೆ ಪ್ರಯೋಜನವಿಲ್ಲ." (ರಾಷ್ಟ್ರೀಯವಾದದ ಕ್ಲಾಸುಗಳು, ಪು–103) ಹಾಗೂ ಅಂತರ್ಜಾತಿ ವಿವಾಹಗಳು ಆಗಬೇಕೆಂದು ಹೇಳಿದ ಗಾಂಧೀಜಿಯವರ ಅಸ್ಪೃಶ್ಯರ ಪರವಾದ ನಡೆಯನ್ನು ಕುರಿತು ವಿವೇಚನೆಗೆ ಒಳಪಡಿಸಲಾಗಿದೆ.ಇದರ ಜೊತೆಗೆ "ಕೆಳ ಜಾತಿಗಳು ಹಿಂದಿನ ಜನ್ಮದ ಪಾಪಗಳಿಗಾಗಿ ಈಗಾಗಲೆ ದೇವರಿಂದ ಶಿಕ್ಷೆಗೊಳಪಟ್ಟಿದ್ದಾರೆ. ಮನುಷ್ಯರಾದ ನೀವು ಈ ಯಾತನೆಯನ್ನು ಮತ್ತಷ್ಟು ಹೆಚ್ಚಿಸಬಾರದು." (ರಾಷ್ಟ್ರೀಯವಾದದ ಕ್ಲಾಸುಗಳು, ಪು–100) ಎಂದು ಹೇಳಿದ ಗಾಂಧೀಜಿಯವರ ಕರ್ಮಸಿದ್ಧಾಂತದ ಬಗೆಗಿನ ವೈರುಧ್ಯದ ನಿಲುವನ್ನು ಸಹಾ ಇಲ್ಲಿ ಕಟು ವಿಮರ್ಶೆಗೆ ಒಳಪಡಿಸಲಾಗಿದೆ. ರಾಷ್ಟ್ರೀಯವಾದದ ಚರ್ಚೆಗಳು ಪಾಪಪ್ರಜ್ಞೆಯ, ಆತ್ಮಾವಲೋಕನದ ನೈತಿಕತೆಯ ಪ್ರಶ್ನೆಗಳನ್ನು ಮುಖಾಮುಖಿಯಾಗುವ; ಮೌಢ್ಯಾಧಾರಿತ ಕರ್ಮ ಸಿದ್ಧಾಂತಗಳನ್ನು ಛಿದ್ರಗೊಳಿಸುವ; ಎಲ್ಲರನ್ನೂ ಒಳಗೊಳ್ಳುವ ತಿಳುವಳಿಕೆಯ ಮೂಲಕ ವಿಶಾಲ ತಳಹದಿಯ ಮೇಲೆ ತನ್ನನ್ನು ತಾನು ಕಟ್ಟಿಕೊಳ್ಳಬಲ್ಲದೆ? ಎಂಬ ಬಹಳ ಮುಖ್ಯವಾದ ಪ್ರಶ್ನೆಯನ್ನು ಸರ್ಕಾರ್ ಅವರು ನಮ್ಮ ಮುಂದಿಡುತ್ತಾರೆ.

**ಸಹಿಷ್ಣುತೆಯ ಪ್ರಜಾಪ್ರಭುತ್ವವಾದಿ ರಾಷ್ಟ್ರೀಯವಾದ**

'ರಾಷ್ಟ್ರೀಯವಾದವು ಹಳೆಯದೆ–ಹೊಸದೆ–ವ್ಯಕ್ತಿನಿಷ್ಠವೆ–ಜನಾಂಗೀಯ ಸಂಬಂಧಿಯೆ–ಸಾರ್ವತ್ರಿಕವೇ–ತತ್ವಸಿದ್ಧಾಂತವೆ–ಭಾವನೆಯೆ–ಒಳಗೊಳ್ಳುವಿಕೆಯೆ–ಹೊರಗಿಡುವಿಕೆಯೆ–ಸಾಂಸ್ಕೃತಿಕವೆ–ರಾಜಕೀಯವೆ–ಒಳ್ಳೆಯದೆ–ಕೆಟ್ಟದೆ?' (ರಾಷ್ಟ್ರೀಯವಾದದ ಕ್ಲಾಸುಗಳು, ಪು–106) ಎಂಬ ತಾತ್ವಿಕ ಪ್ರಶ್ನೆಗಳನ್ನು ಮಂಡಿಸುವ ಮೂಲಕ ರಾಷ್ಟ್ರೀಯವಾದವನ್ನು ಭಿನ್ನ ನೆಲೆಗಳಿಂದ ವಿಶ್ಲೇಷಿಸುವ ಅಚಿನ್ ವನೈಕ್ ಅವರು "ಪ್ರಜಾಪ್ರಭುತ್ವ–ವಿರೋಧಿ ಅಸಹಿಷ್ಣುತೆಯ, ಯುದ್ಧೋನ್ಮಾದದ, ಆಕ್ರಮಕ ರಾಷ್ಟ್ರೀಯವಾದವನ್ನು ಸ್ಥಾಪಿಸಿ ಹರಡುವ ಪ್ರಯತ್ನವನ್ನು; ನಾವು ಸಹಿಷ್ಣುತೆಯ, ಪ್ರಜಾಪ್ರಭುತ್ವವಾದಿ, ಮಾನವೀಯತೆಯ,ಒಳಗೊಳ್ಳುವಿಕೆಯ ರಾಷ್ಟ್ರೀಯವಾದದಿಂದ ಮುಖಾಮುಖಿಯಾಗಬೇಕು" (ರಾಷ್ಟ್ರೀಯವಾದದ ಕ್ಲಾಸುಗಳು, ಪು–106) ಎಂದು ಹೇಳುತ್ತಾರೆ. ಈ ಮಾತುಗಳು, ಈ ಹೊತ್ತಿಗೆ ನಾವು ನಿರ್ವಚಿಸಿಕೊಳ್ಳಬೇಕಾದ ರಾಷ್ಟ್ರೀಯವಾದದ

ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ. ರಾಷ್ಟ್ರೀಯವಾದವು ಮೂಲಭೂತವಾದಿ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡ ತಕ್ಷಣ ಎದುರಾಗುವ ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚರ್ಚಿಸುವ ಅಚಿನ್ ಅವರು "ಭಾರತದಲ್ಲಿ ನಮ್ಮ ಸಾರಸತ್ವ ಹಿಂದೂ ಧರ್ಮ. ಅದರಲ್ಲೂ ಬ್ರಾಹ್ಮಣ್ಯದ ಹಿಂದೂ ಧರ್ಮ. ನೀನು ದಲಿತನಾಗಿದ್ದರೆ, ಹಿಂದುಳಿದ ಜಾತಿಯವನಾಗಿದ್ದರೆ, ಮುಸ್ಲಿಮನಾಗಿದ್ದರೆ, ಕ್ರಿಶ್ಚಿಯನ್ ಆಗಿದ್ದರೆ, ಕಮ್ಯುನಿಸ್ಟ್ ಆಗಿದ್ದರೆ ಇದನ್ನು ಒಪ್ಪಿಕೊ ಮತ್ತು ಅನುಸರಿಸು ಎಂದು ವಾದಿಸುತ್ತೀರಿ, ಒತ್ತಾಯಿಸುತ್ತೀರಿ.... ಧಾರ್ಮಿಕ ರಾಷ್ಟ್ರೀಯವಾದ, ಸಹಜವಾಗಿಯೆ ಸೆಕ್ಯುಲರ್ ರಾಷ್ಟ್ರೀಯವಾದ ಅಲ್ಲವಾದ್ದರಿಂದ, ಅಪಾಯಕಾರಿಯಾಗಿ ಪ್ರಜಾಪ್ರಭುತ್ವ ವಿರೋಧಿಯಾಗಿರುತ್ತದೆ.... ಬಹು–ಧಾರ್ಮಿಕತೆ, ಬಹು–ಸಂಸ್ಕೃತಿಗಳು ಇರುವಂತಹ ಭಾರತದಂತಹ ದೇಶದಲ್ಲಿ ಕೋಮುವಾದೀಕರಣಗೊಂಡ ರಾಷ್ಟ್ರೀಯವಾದ ಇದ್ದರೆ ಅಲ್ಲಿ ಧರ್ಮವಲ್ಲದ್ದನ್ನು, ಸೆಕ್ಯುಲರ್ ಅನ್ನು ಮಾತ್ರ ವಿರೋಧಿಸುವುದಿಲ್ಲ, ಜೊತೆಗೆ 'ಅನ್ಯ' ಧರ್ಮದ ವಿರುದ್ಧವೂ ಹಗೆತನವೂ ಇರುತ್ತದೆ. ಇದು ತುಂಬಾ ಅಪಾಯಕಾರಿ ಮತ್ತು ಇಲ್ಲಿ ಜರುಗುತ್ತಿರುವುದೂ ಸಹಾ ಇದೆ ಆಗಿದೆ. ಈ ದೇಶದಲ್ಲಿ ಮತ್ತಷ್ಟು ಮಾನವೀಯ, ಸಭ್ಯ ಸಮಾಜ ಕಟ್ಟಲು ನಾವು ಇದರ ವಿರುದ್ಧ ಹೋರಾಡಬೇಕಾಗಿದೆ" (ರಾಷ್ಟ್ರೀಯವಾದದ ಕ್ಲಾಸುಗಳು, ಪು.112–114) ಎಂದು ಹೇಳುತ್ತಾರೆ. ಧಾರ್ಮಿಕೀಕರಣ, ಕೋಮುವಾದೀಕರಣ, ಮಿಲಿಟರೀಕರಣಗೊಂಡ ರಾಷ್ಟ್ರೀಯವಾದವು ಹೇಗೆ ಅಪಾಯಕಾರಿಯಾದದ್ದು ಹಾಗೂ 'ಅನ್ಯತೆ'ಯ ಭಾವನೆಯನ್ನು ಅಭದ್ರತೆಯ ನೆಲೆಯಲ್ಲಿ ಹೇಗೆ ಜನಮಾನಸದಲ್ಲಿ ಬಿತ್ತುತ್ತದೆ ಎಂಬುದನ್ನು ವಿವರಿಸಿದ್ದಾರೆ. 1957ರಲ್ಲಿ ಸಿ. ವಿ. ರಾಮನ್ ಅವರು ಹೇಳಿದ "ಪರಮಾಣು ಶಸ್ತ್ರಗಳ ಕುರಿತು ಸಂಶೋಧನೆ ಮಾಡುವುದಕ್ಕಿಂತಲೂ ವಿಜ್ಞಾನಿಗಳು ಹಸಿವಿನಿಂದ ನರಳುವುದು ಉತ್ತಮ" ಎಂಬ ಮಾತನ್ನು ಸಾಂದರ್ಭಿಕವಾಗಿ ಉಲ್ಲೇಖಿಸುತ್ತಲೇ ಪ್ರಸ್ತುತ ಭಾರತೀಯರಾದ ನಾವು ಕಟ್ಟಿಕೊಳ್ಳಬೇಕಾದ 'ಅಹಿಂಸಾವಾದಿ, ಪ್ರಜಾಸತ್ತಾತ್ಮಕ, ಸಹಿಷ್ಣುತಾ ರಾಷ್ಟ್ರೀಯವಾದ'ದ ಮಹತ್ವವನ್ನುಮನವರಿಕೆ ಮಾಡಿದ್ದಾರೆ.

**ವಿಮರ್ಶೆ, ಭಿನ್ನಮತವನ್ನು ಹತ್ತಿಕ್ಕುವ ರಾಷ್ಟ್ರೀಯವಾದ ಹಾಗೂ ಟಾಗೋರ್ ಚಿಂತನೆಗಳು**

ಪ್ರಸ್ತುತ ಭಾರತೀಯ ಸಮಾಜದಲ್ಲಿ 'ರಾಷ್ಟ್ರೀಯವಾದ'ವು ಹತ್ತಿಕ್ಕುವ ಅಸ್ತ್ರವಾಗಿ ಬಳಕೆಯಾಗುತ್ತಿರುವ ಅಪಾಯಕಾರಿ ಬೆಳವಣಿಗೆಯನ್ನು ಕುರಿತು ಚರ್ಚಿಸುವ ರಣಬಿರ್ ಚಕ್ರವರ್ತಿ ಅವರು ಟಾಗೋರ್ ಅವರ ರಾಷ್ಟ್ರೀಯವಾದಿ ಚಿಂತನೆಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. 'ರಾಷ್ಟ್ರೀಯವಾದವನ್ನು ಅದೊಂದು ವಿಪತ್ತು ಎಂದು ಮತ್ತೆ ಮತ್ತೆ ಖಂಡಿಸುತ್ತಿದ್ದ' (ರಾಷ್ಟ್ರೀಯವಾದದ ಕ್ಲಾಸುಗಳು, ಪು–122) ಟಾಗೋರ್ ಅವರ ಚಿಂತನೆಗಳನ್ನು ಗಮನಿಸುತ್ತಾ ಹೋದಂತೆ, ಈ ಹೊತ್ತಿನ ರಾಷ್ಟ್ರೀಯವಾದ ತಂದೊಡ್ಡಿರುವ ಅಪಾಯವನ್ನು ಟಾಗೋರ್ ಅಂದೇ ಗ್ರಹಿಸಿದಂತಿದೆ. ಅನ್ಯರನ್ನು ಹೊರಗಿಟ್ಟು, ಅವರನ್ನು ಶತ್ರುಗಳೆಂದು ಪರಿಗ್ರಹಿಸುವ ಸಂಕುಚಿತ ಹಾಗೂ ದ್ವೇಷಪೂರಿತ ರಾಷ್ಟ್ರೀಯವಾದದ ಬಗೆಗೆ ಟಾಗೋರ್ ಅವರಿಗೆ ತೀವ್ರ ಆಕ್ಷೇಪವಿತ್ತು. ಮೊದಲನೆ ವಿಶ್ವಮಹಾಯುದ್ಧ ಆರಂಭವಾದಾಗ 1914ರಲ್ಲಿ ಪ್ರಕಟಗೊಂಡ 'ಯುದ್ಧದ ಮೂಲ ಕಾರಣ' ಪ್ರಬಂಧದಲ್ಲಿ ಟಾಗೋರ್ ಅವರು ವಸಾಹತುಶಾಹಿ ಪ್ರಣೀತ ರಾಷ್ಟ್ರೀಯವಾದವನ್ನು 'ಶುದ್ಧ ಅವಿವೇಕ–ವ್ಯಾದಿ–ತೃಪ್ತಿಪಡಿಸಲಾಗದ ದುರಾಸೆ' ಎಂದು ಖಂಡಿಸುತ್ತ "ವಿಶ್ವಯುದ್ಧದ ಮೂಲ ಈ ಸಾಮ್ರಾಜ್ಯಶಾಹಿ ದೇಶಗಳ ರಾಷ್ಟ್ರೀಯವಾದದಲ್ಲಿದೆ" (ರಾಷ್ಟ್ರೀಯವಾದದ ಕ್ಲಾಸುಗಳು, ಪು–124) ಎಂದು ಹೇಳಿದ್ದಾರೆ. ಈ ಸ್ವರೂಪವನ್ನು ಇಂದು ಭಾರತವನ್ನು ಆಳುತ್ತಿರುವ, ನಿಯಂತ್ರಿಸಿ ನಿರ್ದೇಶಿಸುತ್ತಿರುವ ಕಾರ್ಪೊರೇಟ್ ಪ್ರಾಯೋಜಿತ ಬಂಡವಾಳಶಾಹಿಪರವಾದ ಫ್ಯಾಸಿಸ್ಟ್ ಸರ್ಕಾರಗಳ ನಡೆಗಳಲ್ಲಿ ಗುರುತಿಸಬಹುದು. ಟಾಗೋರರು ಅಂದೇ ಚಿಂತಿಸಿದಂತೆ ರಾಷ್ಟ್ರೀಯವಾದದ ಮೂಲಕ ಬಂದೊದಗಬಹುದಾದ ಜನವಿರೋಧಿ ವಿಪತ್ತುಗಳನ್ನು ಇಂದು ನಾವೆಲ್ಲಾ ಅನುಭವಿಸುವಂತಾಗಿದೆ. 1899 ಡಿಸೆಂಬರ್ 31ರಲ್ಲಿ ಬರೆದ 'ಶತಮಾನದ ಅಸ್ತಮಾನ' ಕವಿತೆಯಲ್ಲಿ ಟಾಗೋರ್ ಅವರು ಕೋಮುವಾದಿ ರಾಷ್ಟ್ರೀಯವಾದ ತಂದೊಡಬಹುದಾದ ಅಪಾಯದ ಕರಿನೆರಳು ಮತ್ತು ಪರಿಣಾಮಗಳನ್ನು ಹೀಗೆ ದಾಖಲಾಗಿದೆ :

> ***"ದೇಶದ ಕುರಿತಾದ ಸ್ವ–ಮೋಹದ–ದುರಾಸೆಯ***
>
> ***ಸನ್ನಿಯ ಅಮಲೇರಿದ ಸ್ಥಿತಿಯ, ಬೆತ್ತಲೆ ಭಾವೋದ್ವೇಗವು***
>
> ***ದ್ವೇಷದ ಅರಚಾಟದ ಮತ್ತು ಉಕ್ಕಿನ ತಿಕ್ಕಾಟದ ತಾಳಕ್ಕೆ ನರ್ತಿಸುತ್ತಿದೆ.***
>
> ***ಜಗತ್ತನ್ನೇ ಆಹಾರವನ್ನಾಗಿಸಿಕೊಂಡ***
>
> ***ತನ್ನ ನಿರ್ಲಜ್ಜ ಆಹಾರದಿಂದಲೇ***
>
> ***ದೇಶದ ಹಸಿವು ಹಿಂಸೆಯ ರೋಷದಲ್ಲಿ ಆಸ್ಫೋಟಿಸಲಿದೆ"***
>
> (ರಾಷ್ಟ್ರೀಯವಾದದ ಕ್ಲಾಸುಗಳು, ಪು–124)

ಜನಾಂಗ ದ್ವೇಷಿ, ಕೋಮುವಾದಿ ರಾಷ್ಟ್ರೀಯವಾದವನ್ನು ವಿರೋಧಿಸುತ್ತಿದ್ದ ಟಾಗೋರ್ ಅವರು "ವಸಾಹತುಶಾಹಿ ಶಕ್ತಿಗಳು ಭಾರತವನ್ನು ಅಮಾನವೀಯವಾಗಿ ಶೋಷಣೆ ಮಾಡುವುದರ, ದೇಶವನ್ನು ಬಡತನದ ಪ್ರಪಾತಕ್ಕೆ ತಳ್ಳುವುದರ ಮತ್ತು ಜನತೆಯ ಆತ್ಮಗೌರವಕ್ಕೆ ಧಕ್ಕೆ ತರುವುದರ ವಿರುದ್ಧ ಜನಾಂದೋಲನ ಹಮ್ಮಿಕೊಳ್ಳುವ ಮಾದರಿಯ ರಾಷ್ಟ್ರೀಯವಾದಿಗಳನ್ನು ಬೆಂಬಲಿಸುತ್ತಿದ್ದರು."

(ರಾಷ್ಟ್ರೀಯವಾದದ ಕ್ಲಾಸುಗಳು, ಪು–125) ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳ ವಿರುದ್ಧದ ಪ್ರತಿರೋಧವೇ ರಾಷ್ಟ್ರೀಯವಾದ ಎಂಬುದನ್ನು ಇದು ಪ್ರತಿಪಾದಿಸುತ್ತದೆ. **"**ಬಡತನ ನಿವಾರಣೆ ಮೂಲಕ ಗ್ರಾಮೀಣ ಪುನರ್ರಚನೆ, ಸಾಮೂಹಿಕ ಶಿಕ್ಷಣ**"**ವನ್ನು ಕುರಿತು ಚಿಂತಿಸಿದ ಟಾಗೋರ್ ಅವರ ರಾಷ್ಟ್ರೀಯವಾದದ ಸ್ವರೂಪದ ವೈಶಾಲ್ಯತೆಯನ್ನು ಅವರ **'**ವಿಶ್ವಭಾರತಿ, ವಿಶ್ವಮಾನವತೆಯ**'** ಪರಿಕಲ್ಪನೆಯಲ್ಲಿ ಗ್ರಹಿಸಬಹುದಾಗಿದೆ. ಒಟ್ಟಾರೆ ರಾಷ್ಟ್ರೀಯವಾದದ ಪರಿಕಲ್ಪನಾತ್ಮಕ ಚರ್ಚೆಯನ್ನು ಒಳಗೊಳ್ಳುವಿಕೆಯ ಸಹಿಷ್ಣುತೆ ಹಾಗೂ ಬಹುತ್ವದ ನೆಲೆಯಲ್ಲಿ ಮರುವ್ಯಾಖ್ಯಾನಿಸಿಕೊಳ್ಳಬೇಕಿದೆ.

**ಆಧಾರ/ಪರಾಮರ್ಶನ ಗ್ರಂಥಗಳು**


- ಜಾನಕಿ ನಾಯರ್, ರೋಹಿತ್ ಆಜಾದ್, ಮೊಹಿಂದರ್ ಸಿಂಗ್, ಮಲ್ಲಾರಿಕಾ ಸಿನ್ಹಾ ರಾಯ್. (ಮೂ.)., ಶ್ರೀಪಾದ ಭಟ್ (ಅನು.) (2020). *ಜೆ.ಎನ್.ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು.* ಕ್ರಿಯಾ ಮಾಧ್ಯಮ.
- ಶ್ರೀಧರ್ ವಿ ಎಸ್. (2020, ಜುಲೈ 10). *ಜೆಎನ್‌ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು: ರಾಷ್ಟ್ರೀಯವಾದ ಎಂದರೇನು?.* ನಾನೂ ಗೌರಿ.ಕಾಮ್.

  https://naanugauri.com/what-is-nationalism-jnu-classes-about-nationalism-book-review-by-pro-v-s-sridhar/